**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10015/2019**

**ಚಾಸಾ ಃ 32**

**ಪ್ರಾಸಾ ಃ 12**

| | | |
|---|---|---|
| **ಹೆಸರು** | **ಃ** | **ಡಾ|| ಎಸ್.ಆರ್. ಚೌಡಯ್ಯ** |
| **ತಂದೆಯ ಹೆಸರು** | **ಃ** | **ರಾಮಚಂದ್ರ** |
| **ವಯಸ್ಸು** | **ಃ** | **70 ವರ್ಷ** |
| **ವೃತ್ತಿ** | **ಃ** | **ನಿವೃತ್ತ ವೈದ್ಯಾಧಿಕಾರಿ, ಸರ್ಕಾರಿ ಆಸ್ಪತ್ರೆ, ದೊಡ್ಡಬಳ್ಳಾಪುರ** |
| **ವಾಸ** | **ಃ** | **ದೊಡ್ಡಬಳ್ಳಾಪುರ.** |

**ಈ ದಿನ ದಿನಾಂಕಃ 10.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. 2010 ರಿಂದ ನಾನು ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತೇನೆ.

2. ದಿನಾಂಕಃ 07.01.2019 ರಂದು ರಾತ್ರಿ 11.10 ಗಂಟೆ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ಸಮಯದಲ್ಲಿ ಪವನ್ ಎಂಬುವವರು ಗಂಗಾಧರ, 29 ವರ್ಷ, ವಾಸಃ ದೇವರಾಜನಗರ, ದೊಡ್ಡಬಳ್ಳಾಪುರ ಇವರನ್ನು ಕಬಾಬ್ ಮತ್ತು ಅವರ ಸಹೋದರರು ಮಚ್ಚಿನಿಂದ ಹಲ್ಲೆ ಮಾಡಿರುತ್ತಾರೆಂಬ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅವರನ್ನು ಪರೀಕ್ಷಿಸಿದಾಗ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಅವರನ್ನು ತುತ್ತು ಘಟಕ ವಿಭಾಗದಲ್ಲಿ ಚಿಕಿತ್ಸೆ ನೀಡುವಾಗ 11.15 ನಿಮಿಷಕ್ಕೆ ತೀರಿಕೊಂಡಿರುತ್ತಾರೆ.

3. ಸದರಿ ವಿಚಾರವನ್ನು ನಾನು ಪೋಲೀಸರಿಗೆ ತಿಳಿಸಿದ್ದು ಈ ಬಗ್ಗೆ ನಾನು ಮಾಹಿತಿಯನ್ನು ನೀಡಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-33 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-33 (ಎ) ಎಂದು ಗುರುತಿಸಲಾಯಿತು.

4. ಅದೇ ರೀತಿ ಸದರಿ ಪವನ್, ತಂದೆ ಗೋಪಾಲಪ್ಪ, 20 ವರ್ಷ, ವಾಸಃಕುಚ್ಚಪ್ಪನಪೇಟೆ, ದೊಡ್ಡಬಳ್ಳಾಪುರ ಇವರೂ ಸಹ ಆನಂದ ಅಲಿಯಾಸ ಕಬಾಬ್ ಇವರು ಹಲ್ಲೆ ಮಾಡಿರುತ್ತಾರೆಂದು ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಒಳರೋಗಿಯಾಗಿ ಸೇರಿಸಿಕೊಂಡು ಚಿಕಿತ್ಸೆ ನೀಡಿರುತ್ತೇನೆ. ಸದರಿಯವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

"1. ತಲೆಯ ಹಿಂಭಾಗದಲ್ಲಿ ನೆತ್ತಿಯ ಮೇಲೆ 6X 1 cm ಮೂಳೆಯ ಆಳದವರೆಗೆ ಹರಿತವಾದ ಗಾಯವಾಗಿರುತ್ತದೆ.

2. ಎಡಮೊಣಕೈನ ಒಳಭಾಗದ ಮಧ್ಯಭಾಗದಲ್ಲಿ 6 cm X 3 mm X 3 mm ಹರಿತವಾದ ಗಾಯವಾಗಿತ್ತು.

3. ಕತ್ತಿನ ಮುಂಭಾಗದ ಮಧ್ಯದಲ್ಲಿ ಕಂದು ಬಣ್ಣದ ಊದಿದ ಗಾಯವಾಗಿತ್ತು

4. ಬಾಯಿಯ ಬಲಭಾಗದ ಮುಂಭಾಗದ ಮೇಲಿನ ಹಲ್ಲು ಬಿದ್ದು ಹೋಗಿ ಗಾಯವಾಗಿತ್ತು ಮತ್ತು ರಕ್ತಸೋರುತ್ತಿತ್ತು."

5. ಮೇಲೆ ಹೇಳಿದ 1 ರಿಂದ 3 ನೇ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, 4 ನೇ ಗಾಯವು ತೀವ್ರ ಸ್ವರೂಪದ ಗಾಯವಾಗಿದ್ದು, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-34 ಎಂದು

ಗುರುತಿಸಲಾಯಿತು. ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿಪಿ-34 (ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದಲ್ಲಿ ನೋಡುತ್ತಿರುವ ಮಚ್ಚಿನಿಂದ ಹೊಡೆದಲ್ಲಿ ಮೇಲೆ ಹೇಳಿದ ಗಾಯಗಳಾಗುವ ಸಾಧ್ಯತೆಯಿರುತ್ತದೆ.

**<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಟಿ.ಜಿ.ವಿ ವಕೀಲರಿಂದಃ</u>**

6. ಆ ದಿನ ರಾತ್ರಿ 11.15 ಗಂಟೆಗೆ ಪವನನು ಗಂಗಾಧರ ಅವರನ್ನು ಕರೆದುಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ. ಮೃತ ಗಂಗಾಧರ ಅವರ ಜೊತೆ ಪವನ ಮತ್ತು ಮಂಜುನಾಥ ಎಂಬುವವರೂ ಸಹ ಇದ್ದರು. ಪೋಲೀಸರಿಗೆ ಮೃತನ ಬಗ್ಗೆ ಮಾಹಿತಿ ನೀಡುವವರೆಗೆ ಪವನನನ್ನು ನೋಡಿರಲಿಲ್ಲ. ಕಬಾಬನ ಹೆಸರನ್ನು ಪವನನು ಹೇಳಿರುತ್ತಾನೆ. ನಾನು ಪೋಲೀಸರಿಗೆ ಮಾಹಿತಿ ನೀಡುವ ಪೂರ್ವದಲ್ಲಿ ಪೋಲೀಸರು ಆಸ್ಪತ್ರೆಗೆ ಬಂದಿರಲಿಲ್ಲ. ಮೃತನ ಮಾಹಿತಿಯನ್ನು ನಗರ ಪೋಲೀಸ್ ಠಾಣೆಗೆ ನೀಡಿರುತ್ತೇನೆ. ನಾನು ನೀಡಿದ ನಿಪಿ-33 ರಲ್ಲಿ ಯಾವ ಠಾಣೆಗೆ ಮಾಹಿತಿ ನೀಡಿರುತ್ತೆನೆಂದು ದಾಖಲಿಸಿರುವುದಿಲ್ಲ ಎಂದರೆ ಸರಿ.

7. ನಿಪಿ-33 ನ್ನು ನನ್ನ ಸ್ವ ಹಸ್ತಾಕ್ಷರದಲ್ಲಿ ಬರವಣಿಗೆ ಮಾಡಿರುತ್ತೇನೆ. ಗಂಗಾಧರ ತೀರಿಕೊಂಡ 5 ನಿಮಿಷಗಳ ನಂತರ ನಿಪಿ-33 ನ್ನು ಬರೆದಿರುತ್ತೇನೆ. ರಾತ್ರಿಯ ಕರ್ತವ್ಯದಲ್ಲಿದ್ದ ಆಸ್ಪತ್ರೆಯ ಅಟೇಂಡರ್ ಮೂಲಕ ಸದರಿ ನಿಪಿ-33 ನ್ನು ಪೋಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಿಪಿ-33 ನ್ನು ಪಡೆದುಕೊಂಡ ನಂತರ ಹಿಂಬರಹ ನೀಡುತ್ತಾರೆ. ಸದರಿ ನಿಪಿ-33 ನ್ನು ದಿನಾಂಕಃ 08.01.2019 ಕ್ಕೆ ಪಡೆದಿರುತ್ತಾರೆಂದರೆ ಸರಿ. ಸದರಿ ನಿಪಿ-33 ನ್ನು ಬರೆಯುವ ಸಮಯದಲ್ಲಿ ಮೃತ ಗಂಗಾಧರನ ಅಣ್ಣ ಮಂಜುನಾಥ ಸಹ ಇದ್ದನು ಎಂದರೆ ಸರಿ. ನಿಪಿ-33 ನ್ನು ಮೃತನ ಅಣ್ಣ ಮಂಜುನಾಥನು ಹೇಳಿದಂತೆ ಬರೆದಿರುತ್ತೇನೆಂದರೆ ಸರಿಯಲ್ಲ.

8. ಮಾಹಿತಿ ನೀಡಿದ ಆ ಕೂಡಲೇ ಪೋಲೀಸರು ಬಂದಿರುತ್ತಾರೆ. ನಾನು ಆ ದಿನ ಪೋಲೀಸರಿಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪವನಕುಮಾರನನ್ನು ನಾನು ರಾತ್ರಿ 11.20 ನಿಮಿಷಕ್ಕೆ ಚಿಕಿತ್ಸೆ ನೀಡಿರುತ್ತೇನೆಂದರೆ ಸರಿ. ಸದರಿ ಪವನನನ್ನು ಪರೀಕ್ಷಿಸುವ ಸಮಯದಲ್ಲಿ ಮದ್ಯಪಾನ ಮಾಡಿದ್ದನು ಎಂದರೆ ಸರಿಯಲ್ಲ. ಮದ್ಯಪಾನ ಮಾಡಿದ್ದರೂ ಸಹ ಮಾಡಿರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಪವನನನ್ನು ಪರೀಕ್ಷಿಸುವ ಸಮಯದಲ್ಲೂ ಸಹ ಮಂಜುನಾಥನು ಹೇಳಿರುತ್ತಾನೆಂದರೆ ಇಬ್ಬರೂ ಹೇಳಿರುತ್ತಾರೆ. ಪವನನನ್ನು ಪರೀಕ್ಷಿಸುವ ಸಮಯದಲ್ಲಿ ಅವನಿಗೆ ಪ್ರಜ್ಞೆ ಇತ್ತು.

9. ಪವನನಿಗೆ ಹಲ್ಲು ಬಿದ್ದಿದ್ದರಿಂದ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಪವನನಿಗೆ 3 ಮತ್ತು 4 ರಲ್ಲಿ ಹೇಳಿದಂತಹ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಗಾಯಗಳಾದಾಗಲೂ ಸಹ ಪವನನೂ ಮಾತನಾಡುವ ಸ್ಥಿತಿಯಲ್ಲಿದ್ದನು. ಆ ದಿನವೇ ಹೇಳಿಕೆ ನೀಡುವ ಸ್ಥಿತಿಯಲ್ಲಿದ್ದನು. ಕುಡಿದ ಅಮಲಿನಲ್ಲಿ ಹರಿತವಾದ ವಸ್ತುವಿನ ಮೇಲೆ ಬಿದ್ದಲ್ಲಿ 1 ರಿಂದ 4 ರ ಗಾಯಗಳಾಗುವ ಸಾಧ್ಯತೆಯಿರುತ್ತದೆಂದರೆ 1 ಮತ್ತು 2 ನೇ ಗಾಯಗಳು ಮಾತ್ರ ಆಗುವ ಸಾಧ್ಯತೆಯಿರುತ್ತದೆ. ಆ ರೀತಿ ಬಿದ್ದರೆ ಎಲ್ಲಾ ಗಾಯಗಳಾಗುವ ಸಾಧ್ಯತೆಯಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ನಿಪಿ-34 ರಲ್ಲಿ ಎಷ್ಟು ಗಂಟೆಯವರೆಗೂ ಚಿಕಿತ್ಸೆ ನೀಡಿರುತ್ತೇನೆಂದ ತಿಳಿಸಿರುವುದಿಲ್ಲ ಎಂದರೆ ಸರಿ.

10. ನನ್ನ ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ಅವಧಿ ತಿಳಿಸಿರುವುದಿಲ್ಲ ಎಂದರೆ ಸರಿ, ಕಾರಣ ಆಗ ತಾನೇ ಆದ ಗಾಯಗಳಾಗಿದ್ದವು. ಯಾರು ಹಲ್ಲೆ ಮಾಡಿರುತ್ತಾರೆಂದು ನನಗೆ ಖುದ್ದು ಮಾಹಿತಿ ಇರುವುದಿಲ್ಲ. ಮಂಜುನಾಥನು ಹೇಳಿದ್ದರಿಂದ ಕಬಾಬನ ಹೆಸರು ಬರೆದಿರುತ್ತೇನೆಂದರೆ

ಇಬ್ಬರೂ ಹೇಳಿರುತ್ತಾರೆ. ಪವನಕುಮಾರನಿಗೆ ನಿಪಿ-34 ರಲ್ಲಿ ಹೇಳಿದಂತಹ ಯಾವುದೇ ಗಾಯಗಳಾಗದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ**

ಇರುವುದಿಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10015/2019**

**ಚಾಸಾ ಃ 31**

**ಪ್ರಾಸಾ ಃ 11**

| | | |
|---|---|---|
| **ಹೆಸರು** | **ಃ** | **ಕೆ ವೆಂಕಟೇಶ್** |
| **ತಂದೆಯು ಹೆಸರು** | **ಃ** | **ಕಾಳಪ್ಪ** |
| **ವಯುಸ್ಸು** | **ಃ** | **49 ವರ್ಷ** |
| **ವೃತ್ತಿ** | **ಃ** | **ಪೋಲೀಸ್ ಇನ್ಸ್‌ಪೇಕ್ಟರ್, ಲೋಕಾಯುಕ್ತ** |
| **ವಾಸ** | **ಃ** | **ಬೆಂಗಳೂರು** |

**ಈ ದಿನ ದಿನಾಂಕಃ 10.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ</u>**

1. ಜನವರಿ 2019 ರಿಂದ ಫೆಬ್ರವರಿ 2020 ರವರೆಗೆ ಮತ್ತು ದಿನಾಂಕಃ 17.03.2021 ರಿಂದ 29.04.2021 ರವರೆಗೆ ನಾನು ದೊಡ್ಡಬಳ್ಳಾಪುರ ನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದ ಆರೋಪಿಗೆ ಸಂಬಂಧಪಟ್ಟಂತೆ ದೊಡ್ಡಬಳ್ಳಾಪುರದ ನಗರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆಯೇ ಎಂಬ ಬಗ್ಗೆ ದೊಡ್ಡಬಳ್ಳಾಪುರದ ವೃತ್ತ ನೀರಿಕ್ಷಕರು ಕೋರಿದ ಮಾಹಿತಿಯ ಮೇರೆಗೆ ನಮ್ಮ ಠಾಣೆಯಲ್ಲಿ ಸದರಿ ಆರೋಪಿಯ ವಿರುದ್ಧ ಈ ಹಿಂದೆ ದಾಖಲಾದ ಮೊಕದ್ದಮೆ ಸಂಖ್ಯೆ 200/2016 ಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಮತ್ತು ರೌಡಿಶೀಟ್‌ನ್ನು ದೃಢಿಕರಿಸಿ ದೊಡ್ಡಬಳ್ಳಾಪುರದ ವೃತ್ತ ನೀರಿಕ್ಷಕರಿಗೆ ನೀಡಿರುತ್ತೇನೆ. ನಾನು ನೀಡಿದ

ಸದರಿ ರೌಡಿಶೀಟ್‌ನ್ನು ಈಗ ನೋಡುತ್ತಿದ್ದು ಅದನ್ನು ನಿಪಿ- 31 ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿ, ಅಂತಿಮ ವರದಿ ಮತ್ತು ಅದರ ಲಗತ್ತು ದಾಖಲೆಗಳನ್ನು (11 ಹಾಳೆಗಳು ಇರುತ್ತವೆ) ಒಟ್ಟಾಗಿ ನಿಪಿ-32 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಟಿ.ಜಿ.ವಿ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ